ಅವರಿಗೆ ಖಾಯಂ ಇಲ್ಲ, ಭಡ್ತಿ ಇಲ್ಲ, ಈ ಅನ್ಯಾಯವನ್ನು ಸರಿಪಡಿಸಬೇಕೆಂದು, ಅವರಿಗೆ ನ್ಯಾಯವಾದ ಸಂಬಳ, ಸೇವಾ ನಿಯಮಾಗಳನ್ನು ಕೊಟ್ಟು ಜಿಲ್ಲಾ ಯೂನಿಯನ್ ಮಟ್ಟದಲ್ಲಿ ಭಡ್ತಿ ಮತ್ತು ಸೇವೆ ಖಾಯಂ ಮಾಡುವಂತಹ ಸೇವಾ ನಿಯಮಾವಳಿಗಳನ್ನು ಅವರಿಗೆ ಅನ್ವಯಿಸಬೇಕೆಂದು ಅವರು ಸಂಘಗಳನ್ನು ಮಾಡಿಕೊಂಡು ಸರ್ಕಾರದಲ್ಲಿ ಮತ್ತು ಯೂನಿಯನ್‌ಗಳಲ್ಲಿ ಹೋರಾಟ ಮಾಡುತ್ತಿದ್ದರೂ ಇನ್ನೂ ಪ್ರತಿಫಲ ಇಲ್ಲವಾಗಿ ಅವರು ಹೋರಾಟಕ್ಕೆ ಇಳಿಯುವ ಸಂಭವವಿದೆ. ಇದನ್ನು ತಪ್ಪಿಸಲು ಅವರ ನ್ಯಾಯಯುತವಾದ ಬೇಡಿಕೆಗಳನ್ನು ಈಡೇರಿಸಲಿ ಕನಿಷ್ಠ ವೇತನ, ಕೆಲಸಕ್ಕೆ ತಕ್ಕ ಸಂಬಳ, ಕೆಲಸ ಖಾಯಂ ಮಾಡುವುದು. ಸೇವಾ ನಿಯಮಗಳನ್ನು ಅನ್ವಯ ಮಾಡುವುದು ಮತ್ತು ಇತರ ಸಹಕಾರ ಸಂಘಗಳಂತೆ ಸರ್ಕಾರದ ಅಧಿಕಾರಿಗಳಂತೆ ಸೇವಾ ನಿಯಮಗಳನ್ನು ಅನ್ವಯಿಸಂವಂತೆ ಮಾಡುವುದು ನ್ಯಾಯಯುತವಾದುದು.

ಈ ಬಗ್ಗೆ ಸರ್ಕಾರ ಈ ಸೊಸೈಟಿ ನೌಕರರ ಬೇಡಿಕೆಗಳನ್ನು ಈಡೇರಿಸಲು ತಕ್ಕ ಕ್ರಮ ಕೈಗೊಂಡು ನೌಕರರ ಮತ್ತು ಹಾಲು ಉತ್ಪಾದಕರ ಸಹಕಾರ ಸಂಘಗಳ ಅಭಿವೃದ್ಧಿಗೆ ನೆರವು ನೀಡುವ ಅವಶ್ಯಕತೆ ಇರುವುದರಿಂದ ಸರ್ಕಾರ ಈ ಬಡ ನೌಕರರ ರಕ್ಷಣೆಗೆ ಬಂದು ನ್ಯಾಯಯುತ ರಕ್ಷಣೆ ಕೊಡಬೇಕೆಂದು ಈ ಮೂಲಕ ಒತ್ತಾಯಿಸಿ ಮಾನ್ಯ ಪಶುಸಂಗೋಪನಾ ಇಲಾಖಾ ಮಂತ್ರಿಗಳು ಈ ಬಗ್ಗೆ ಹೇಳಿಕೆಯನ್ನು ನೀಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಕೃಷ್ಣ (ಪಶುಸಂಗೋಪನೆ ಮತ್ತು ರೇಷ್ಮೆ ಖಾತೆಯ ಸಚಿವರು).— ಮಾನ್ಯ ಅಧ್ಯಕ್ಷರೇ, ಹಾಲು ಉತ್ಪಾದಕರ ಸಹಕಾರ ಸಂಘಗಳು ಸ್ವತಂತ್ರವಾದ ಸಂಸ್ಥೆಗಳಾಗಿದ್ದು ಅವುಗಳ ಸಾಂಪತ್ತಿಕ ಸ್ಥಿತಿಗೆ ಅನುಗುಣವಾಗಿ, ಅವುಗಳ ನೌಕರರ ವೃಂದದ ಬಲ, ವೇತನ ಶ್ರೇಣಿ ಹಾಗೂ ನಿಯಮಗಳನ್ನು ರೂಪಿಸಬೇಕಾಗುತ್ತದೆ. ಏಕ ರೂಪದ ವೃಂದ, ಬಲ, ವೇತನ ಶ್ರೇಣಿ ಹಾಗೂ ನಿಯಮಗಳನ್ನು ರೂಪಿಸಿ ಅನುಷ್ಠಾನಕ್ಕೆ ತರುವುದು ಕಷ್ಟ ಸಾಧ್ಯ.

೮ ಹಾಲುಮಂಡ್ಡಿಯನ್ನು ಕಾನೂನು ಬಾಹಿರವಾಗಿ ಸಂಗ್ರಹಿಸಿದ ಸಾಗರದ ಪ್ರಮುಖರೊಬ್ಬರ ಬಂಧನ ಹಾಗೂ ಬಿಡುಗಡೆಯ ಬಗ್ಗೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).— ಮಾನ್ಯ ಅಧ್ಯಕ್ಷರೇ, ಸೆಪ್ಟೆಂಬರ್ ೧೯೮೮ರ ಕೊನೆ ಭಾಗದಲ್ಲಿ ಶಿವಮೊಗ್ಗ ಜಿಲ್ಲೆ ಸಾಗರದಲ್ಲಿ ಪರವಾನಿಗೆ ಇಲ್ಲದೆ ಲಕ್ಷಾಂತರ ರೂಪಾಯಿ ಬೆಲೆ ಬಾಳುವ ''ಹಾಲುಮಡ್ಡಿ''ಯನ್ನು ಕಾನೂನು ಬಾಹಿರವಾಗಿ ಸಂಗ್ರಹಿಸಿದ್ದ ಸಾಗರದ ಪ್ರಮುಖರೊಬ್ಬರನ್ನ, ದಕ್ಷ ಅರಣ್ಯ ಮತ್ತು ಪೋಲೀಸ್ ಅಧಿಕಾರಿಗಳು ಬಂಧಿಸಿ ನಂತರ ಬಿಡುಗಡೆ ಮಾಡಿದ್ದು; ಇಂತಹ ಅವ್ಯವಹಾರ ಮಾಡಿದ ವ್ಯಕ್ತಿಯನ್ನು ಅಧಿಕಾರಿಗಳು ಬಂಧಿಸಿರುವುದರ ವಿರುದ್ಧ ಕೆಲವು ಪ್ರಮುಖರು ಬೆದರಿಕೆ ಒಡ್ಡಿ ಅಂತಹ ಅಧಿಕಾರಿಗಳನ್ನು ವರ್ಗಾವಣೆ ಮಾಡಿಸಲು ಹೊರಟಿದ್ದು, ಈ ಘಟನೆ ನಡೆದಿರುವುದು ನಿಜವೇ, ಪ್ರಾಮಾಣಿಕ ಅಧಿಕಾರಿಗಳಿಗೆ ರಕ್ಷಣೆ ಇದೆಯೇ, ಕಾನೂನು ಬಾಹಿರವಾಗಿ ಅರಣ್ಯ ಸಂಪತ್ತು ಲೂಟಿ ಮಾಡಿರುವ ಇಂತಹ ವ್ಯಕ್ತಿಗಳ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂಬ ಬಗ್ಗೆ ಸರ್ಕಾರದ ಹೇಳಿಕೆ ಶೀಘ್ರ ಬಯಸುತ್ತೇನೆ.

ಶ್ರೀ ಸಿದ್ದರಾಮಯ್ಯ.— ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಕೂಡ ಉತ್ತರವನ್ನು ತರಿಸಿಕೊಡಲಾಗುವುದು.

(ಶ್ರೀ ಕೆ. ಬಿ. ಶಾಣಪ್ಪನವರು ಗೈರು ಹಾಜರಾಗಿದ್ದಾರೆ)

೯ ಸುಳ್ಯ ತಾಲ್ಲೂಕಿನಲ್ಲಿ ನೇಮಕಗೊಂಡ ತಮಿಳು ಅಧ್ಯಾಪಕರ ಸೇವೆಯನ್ನು ಖಾಯಂಗೊಳಿಸಲು ಒತ್ತಾಯ.

ಶ್ರೀ ಕೆ. ಕುಶಾಲ (ಸುಳ್ಯ).— ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನಲ್ಲಿ ೧೯೭೨ರಲ್ಲಿ ನೇಮಕಾತಿಗೊಂಡ ಇಬ್ಬರು ತಮಿಳು ಅಧ್ಯಾಪಕರು ಇದ್ದು, ಇವರಿಗೆ ೧೯೭೨ರಿಂದ ಈತನಕ ಪ್ಲಾನ್ ಯೋಜನೆ (ಪ್ಲಾನ್ ಸ್ಕೀಂ)ಯಂತೆ, ಪ್ರತಿವರ್ಷ, ವರ್ಷದಲ್ಲಿ ಒಂದು ಸಲ ಮಂಜೂರಾತಿ

ಪಡಕೊಂಡು ಸಂಬಳ ನೀಡಲಾಗುತ್ತಿತ್ತು. ಇವರು ಸರಕಾರಿ ಸೇವೆಯನ್ನು ಮಾಡುತ್ತಿರುವುದು ೧೬ ವರ್ಷಗಳಾದರೂ, ಖಾಯಂ ನೇಮಕಾತಿ ಮಾಡಿರುವುದಿಲ್ಲ. ೧೯೮೮ರಲ್ಲಿ ವರ್ಗಾವಣೆ ತಿಂಗಳವರೆಗಿನ ಸಂಬಳವನ್ನು ಆದೇಶ ಸಂಖ್ಯೆ ಇಡಿ—೨೨೭—ಪಿಯುಂಸಿ—೮೮ ಬೆಂಗಳೂರು ದಿನಾಂಕ ೪-೮-೮೭ರಂತೆ ನೀಡಲಾಯಿತು. ನಂತರದ ನಾಲ್ಕು (೪) ತಿಂಗಳ ಸಂಬಳವನ್ನು ತಾಲ್ಲೂಕು ಸಹಾಯಕ ವಿದ್ಯಾಧಿಕಾರಿಗಳ ವ್ಯಾಪ್ತಿಯಲ್ಲಿ ನೀಡಲಾಯಿತು. ಈಗ ಜೂನ್ ತಿಂಗಳಿನಿಂದ ಸೆಪ್ಟೆಂಬರ್ ೧೯೮೮ರವರೆಗಿನ ಸಂಬಳವನ್ನು ಪ್ಲಾನ್ ಸ್ಕೀಂ ಆದುದರಿಂದ ನೀಡಲಾಗಿಲ್ಲ. ಸದ್ರಿ ಅಧ್ಯಾಪಕರುಗಳು ತುಂಬಾ ಕಷ್ಟದಿಂದ ಜೀವನ ನಡೆಸುವ ಪರಿಸ್ಥಿತಿ ಬಂದಿದೆ. ಇವರ ಹುದ್ದೆಯನ್ನು ಖಾಯಂಗೊಳಿಸುವಂತೆಯೂ ಸರಕಾರವನ್ನು ಈ ಹಿಂದೆ ಒತ್ತಾಯಪಡಿಸಲಾಗಿತ್ತು. ಅಲ್ಲದೆ ಜಿಲ್ಲಾಪರಿಷತ್‌ಗೆ ಕೂಡ ಬರೆದುಕೊಂಡಿದ್ದರೂ ಈತನಕ ಕ್ರಮ ಕೈಕೊಂಡಿರುವುದಿಲ್ಲ. ಆದುದರಿಂದ ಇವರ ೪ ತಿಂಗಳ ಸಂಬಳವನ್ನು ನೀಡುವಂತೆ ಮತ್ತು ಇವರ ಹುದ್ದೆಯನ್ನು ಖಾಯಂಗೊಳಿಸುವಂತೆ ಸರಕಾರವನ್ನು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಸಿದ್ದರಾಮಯ್ಯ.— ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಸೂಳ್ಯ ಮತ್ತು ಕಂದಕ ಕಾಲೋನಿಯ ಶಾಲೆಯೊಂದರಲ್ಲಿ ೨ ತರಗತಿಗಳು ಶಿಕ್ಷಕರ ಹುದ್ದೆಯನ್ನು ತಾತ್ಕಾಲಿಕವಾಗಿ ಸೃಜಿಸಿ ಕಾಲಾವಧಿ ಕಾಲಕ್ಕೆ ಹುದ್ದೆಯ ಸೃಜನೆಯನ್ನು ನವೀಕರಿಸಲಾಗುತ್ತಿದೆ, ಸರ್ಕಾರದ ಆದೇಶ ಸಂಖ್ಯೆ:ಇಡಿ೨೨೭ ಪಿಎಂಸಿ೮೮ ದಿನಾಂಕ ೪-೮-೮೭ರಲ್ಲಿ ಈ ಹುದ್ದೆಗಳನ್ನು ನವೀಕರಿಸಲಾಗಿತ್ತು. ಈ ಬಾರಿಯೂ ಪ್ರಸ್ತಾವನೆ ಬಂದಿರುತ್ತದೆ, ಸದರಿ ಹುದ್ದೆಗಳನ್ನು ಖಾಯಂ ಆಗಿ ಮುಂದುವರಿಸಲು ಪರಿಶೀಲಿಸಲಾಗುತ್ತಿದೆ.

೧೦ ದಕ್ಷಿಣ ಕನ್ನಡ ಜಿಲ್ಲೆಯ ಸಕ್ಕರೆ ಕಾರ್ಖಾನೆಗೆ ಕಬ್ಬು ಒದಗಿಸಿದ ರೈತರಿಗೆ ಹಣ ಪಾವತಿ ಮಾಡಲು ಒತ್ತಾಯ.

ಶ್ರೀ ಬಸವರಾಜ್ (ಬ್ರಹ್ಮಾವರ).— ಮಾನ್ಯ ಅಧ್ಯಕ್ಷರೆ, ಬ್ರಹ್ಮಾವರದಲ್ಲಿರುವ ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆಗೆ ಕಬ್ಬು ಒದಗಿಸಿದ ರೈತರಿಗೆ ಹಣ ಪಾವತಿ ಮಾಡಲು ಸರಕಾರ ಸೂಕ್ತ ನೆರವು ನೀಡಬೇಕು ಎಂದೂ ಕಳೆದ ಅಧಿವೇಶನದಲ್ಲಿ ಸರಕಾರವನ್ನು ಒತ್ತಾಯಿಸಿದಾಗ ಮಾನ್ಯ ಕೈಗಾರಿಕಾ ಸಹಕಾರಿ ಮಂತ್ರಿಗಳಿಂದ 'ಹಣ ಪಾವತಿಗೆ ಶೀಘ್ರ ಕ್ರಮ ಕೈಗೊಳ್ಳಲಾಗುವು'ದೆಂಬ ಆಶ್ವಾಸನೆ ಬಂದಿತ್ತು. ಆದರೆ ಆ ಆಶ್ವಾಸನೆ ಮರೀಚಿಕೆಯಂತೆ ಹಾಗೆಯೇ ಉಳಿದಿದೆ. ಈ ವರ್ಷ ಜಿಲ್ಲೆಯಲ್ಲಿ ಬಹು ದೊಡ್ಡ ಸಂಖ್ಯೆಯಲ್ಲಿ, ಬಹು ವಿಸ್ತಾರವಾದ ಭಾಗದಲ್ಲಿ ರೈತರು ಕಬ್ಬು ಬೆಳೆಸಿದ್ದಾರೆ. ಹಿಂದಿನ ಹಣ ಪಾವತಿಯೇ ಆಗದಿದ್ದಲ್ಲಿ ಅವರಿಗೆಲ್ಲ ನಿರಾಶೆಯೇ ಗತಿ. ಆದ್ದರಿಂದ, ಕಳೆದ ವರ್ಷದ ಬಾಕಿ ಪಾವತಿಗೆ ವಿಶೇಷ ಮಾಡದೆ, ಸರಕಾರವೇ ಕಾರ್ಖಾನೆಗೆ ಮೆದು ಸಾಲ ಒದಗಿಸಿ, ರೈತರ ನೆರವಿಗೆ ಬರಬೇಕು, ಇನ್ನೆರಡು ತಿಂಗಳಲ್ಲಿ ಕಾರ್ಖಾನೆ ಕಬ್ಬು ಅರೆಯುವ ಕಾರ್ಯ ಆರಂಭಿಸಬೇಕಿದ್ದು, ಅದಕ್ಕಾಗಿ ಬೇಕಾದ ಪೂರ್ವ ಸಿದ್ಧತೆಗೂ ಆರ್ಥಿಕ ನೆರವು ಕೂಡಲೇ ನೀಡಬೇಕು ಎಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಸಿದ್ದರಾಮಯ್ಯ.— ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ, ಬ್ರಹ್ಮಾವರ, ಇವರ ವಸೂಲಾತಿಯು ಬಹಳ ಕಡಿಮೆ ಇದ್ದು, ಆರ್ಥಿಕ ತೊಂದರೆಗಳಿರುವುದರಿಂದ ರೈತರಿಂದ ಕೊಂಡ ಕಬ್ಬಿನ ಹಣದ ಪಾವತಿ ಮಾಡಲು ಸಾಧ್ಯವಾಗಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಆದ್ದರಿಂದ ರೈತರಿಗೆ ಪಾವತಿ ಮಾಡಲು, ವಿದ್ಯುಚ್ಛಕ್ತಿ ಬಿಲ್ಲು ತುಂಬಲು, ನೌಕರರ ಜೀವವಿಮೆ ಹಣವನ್ನು ಮತ್ತು ಭವಿಷ್ಯ ನಿಧಿಯ ಹಣಗಳನ್ನು ಬೆಗೆತರಿಸಲು ರೂ. ೧೦೦.೦೦ ಲಕ್ಷ ಮೆದು ಸಾಲವನ್ನು ಕೋರಿದ್ದಾರೆ. ಇದೇ ರೀತಿ ಈ ಕಾರ್ಖಾನೆಯು ರೂ. ೧೫೦.೦೦ ಲಕ್ಷಗಳನ್ನು ವಾಣಿಜ್ಯ ಬ್ಯಾಂಕುಗಳು ಹಾಗೂ ಸಹಕಾರಿ ಬ್ಯಾಂಕುಗಳಿಂದ ಸಾಲ ಪಡೆಯಲು ಸರ್ಕಾರದ ಅನುಮತಿಯನ್ನು ಮತ್ತು ಖಾತರಿಯನ್ನು ಕೋರಿದೆ. ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಡಿ. ಎ. ಚಿನ್ನಪ್ಪ.— ೧೨ ಜನ ಮಂತ್ರಿಗಳ ಪೈಕಿ ಎಲ್ಲದಕ್ಕೂ ಒಬ್ಬರೇ ಸಚಿವರು ಉತ್ತರ ಹೇಳುತ್ತಾ ಇದ್ದಾರೆ.